ಏನಾಗಿದೆ ಈಗ? ಆಗಬಾರದ್ದೇ ಆಗಿದೆ. ಇದು ಭೂಚರಿತ್ರೆಯಲ್ಲೇ ಅತಿ ಘೋರ ಅಧ್ಯಾಯ. 'ಅಧ್ವಾನ ಪರ್ವ' ಎಂದರೆ ಹೆಚ್ಚು ಒಪ್ಪೀತು. ಜೀವಿ ವಿಜ್ಞಾನಿಗಳು ಹೇಳುತ್ತಿದ್ದಾರೆ – ಆರನೆಯ ಸಮೂಹ ಜೀವಿನಾಶ ಪ್ರಾರಂಭವಾಗಿದೆ, ನಿಧಾನ ಗತಿಯಲ್ಲಿ. ಆದರೆ ಅದು ಕಣ್ಣಿಗೆ ಸ್ಪಷ್ಟವಾಗಿ ಕಾಣಿಸುತ್ತಿದೆ. ಚೋದ್ಯವೆಂದರೆ ಇಲ್ಲಿ ನಿಸರ್ಗದ ಪಾತ್ರ ಏನೇನೂ ಇಲ್ಲ, ಮನುಷ್ಯನ ಕೈವಾಡವೇ ದೊಡ್ಡದು. ಇಡೀ ಭೂಮಿಯ ಜೀವಿ ಪರಿಸ್ಥಿತಿಯನ್ನೇ ತಲೆಕೆಳಗು ಮಾಡಿದ ಮಹಾನುಭಾವ ಮನುಷ್ಯ. ಇದಕ್ಕೆ ಯಾರನ್ನು ದೂಷಿಸುವುದು? ಪ್ರತಿ ವ್ಯಕ್ತಿಯ ಬೆರಳು ಅವನನ್ನೇ ಅಪರಾಧಿ ಸ್ಥಾನದಲ್ಲಿ ನಿಲ್ಲಿಸುತ್ತದೆ. ಕನ್ನಡಿಯ ಮುಂದೆ ಅರೆಗಳಿಗೆ ನಿಂತುಕೊಳ್ಳಿ, ಅಪರಾಧಿಗಳ ಪಟ್ಟಿಯಲ್ಲಿ ನೀವೂ ಇದ್ದೀರಿ ಎನ್ನುವುದನ್ನು ನಿಮ್ಮ ಬಿಂಬವೇ ಹೇಳುತ್ತದೆ. ಪಶ್ಚಾತ್ತಪವೆಂಬುದಿಲ್ಲ. ಜೀವಿಗಳ ಭವಿಷ್ಯ ಯಾರೋ ಸಂರಕ್ಷರ ಕೈಯಲ್ಲಿದೆ ಎಂದು ಭಾವಿಸಿ ನಮ್ಮ ಹೊಣೆಯನ್ನು ತಪ್ಪಿಸಿಕೊಳ್ಳಲು ಪ್ರಯತ್ನ ಮಾಡುತ್ತಿರುವುದು ಒಳಮನಸ್ಸಿಗಾದರೂ ಗೊತ್ತಾಗಬೇಕು.



## ಆರನೆಯ ಸಮೂಹ ಜೀವಿನಾಶ

ಹೆಚ್ಚು ದೂರ ಹೋಗುವುದು ಬೇಡ. ಕಳೆದ ಐದು ವರ್ಷದ ಹಿಂದಕ್ಕೆ ಹೋದರೂ ಸಾಕು. ನಮ್ಮ ನಿಸರ್ಗದ ಮೇಲಿನ ಅತಿಕ್ರಮಣದ ಒಂದು ಅಧ್ಯಾಯ ಹಸಿಹಸಿಯಾಗಿಯೇ ನಮ್ಮ ಮುಂದೆಯೇ ತೆರೆದುಕೊಳ್ಳುತ್ತದೆ. 2017ರಲ್ಲಿ 'ಸೈನ್ಸ್' ಎಂಬ ವಿಜ್ಞಾನ ಪತ್ರಿಕೆಯಲ್ಲಿ ಒಂದು ವಿಶೇಷ ಎಚ್ಚರಿಕೆ ಮತ್ತು ದುಗುಡ ಪ್ರಕಟವಾಗಿತ್ತು. 184 ದೇಶಗಳ 15,364 ಮಂದಿ ಖ್ಯಾತ ವಿಜ್ಞಾನಿಗಳು ಸಹಿಹಾಕಿದ ಪತ್ರ ಅದು. ಸಾರಾಂಶ ಇಷ್ಟು:

'ಮನುಷ್ಯ ಭೂಮಿಯ ಮೇಲೆ ಆರನೇ ಸಮೂಹ ಜೀವಿನಾಶಕ್ಕೆ ಬರೀ ಮುನ್ನುಡಿ ಬರೆದಿಲ್ಲ. ಆಗಲೇ ದುಷ್ಟ ಹೆಜ್ಜೆ ಇಟ್ಟಿದ್ದಾನೆ. ಈ ಕ್ರಿಯೆ ನಿಲ್ಲುವ ಹಾಗೆ ಕಾಣುತ್ತಿಲ್ಲ. ಈ ಶತಮಾನ ಮುಗಿಯುವುದರೊಳಗೆ ಈಗಿರುವ ಜೀವಿ ಪ್ರಭೇದಗಳ ದೊಡ್ಡ ಪ್ರಮಾಣ ಕಣ್ಮರೆಯಾಗಲಿದೆ. ಎಲ್ಲ ಪ್ರಾಣಿಗಳಿಗಿಂತ ಈ ಮಾನವ ಪ್ರಾಣಿಯೇ ಅತಿದುಷ್ಟ, ಅತಿ ಅಪಾಯಕಾರಿ.'

ವಿಜ್ಞಾನಿಗಳು ನೀಡಿದ ಎಚ್ಚರಿಕೆಯ ಹಿಂದೆ ಅಪಾರ ನೋವಿದೆ. ಕೋಟಿ ಕೋಟಿ ವರ್ಷಗಳ ಜೀವಿ ವಿಕಾಸವಾಗಿರುವ ಈ ಭೂಮಿಯನ್ನು ಕೆಲವೇ ನೂರು ವರ್ಷಗಳಲ್ಲಿ ಧ್ವಂಸ ಮಾಡಿದ್ದೇವೆ. ನಿರ್ದಯವಾಗಿ ಜೀವಿಗಳನ್ನು ಹಿಚುಕಿ ಹಾಕುತ್ತಿದ್ದೇವೆ. ಭೂಮಿಯ ಮೇಲಿಂದ ಶಾಶ್ವತವಾಗಿ ಗಡಿಪಾರು ಮಾಡುತ್ತಿದ್ದೇವೆ. ಇದಕ್ಕೆ ಮನುಷ್ಯನೇ ಹೊಣೆಯಾಗಿರುವುದರಿಂದ ಭೂವಿಜ್ಞಾನಿಗಳು, ಮಾನವ ವಿಜ್ಞಾನಿಗಳು, ಸಮಾಜ ವಿಜ್ಞಾನಿಗಳು, ಜೀವಿ ವಿಜ್ಞಾನಿಗಳು ಈ ಕಾಲವನ್ನು 'ಆಂಥ್ರೊಪೋಸೀನ್' ಎಂದು ಕರೆಯಿರಿ ಎನ್ನುತ್ತಿದ್ದಾರೆ. ಇದು ಇತಿಹಾಸದಲ್ಲಿ ದಾಖಲೆಯಾಗುವ ಎಲ್ಲ ಲಕ್ಷಣಗಳೂ ಇದೆ. ಅಂದರೆ ನಮ್ಮ ಕರಾಳ ಕೃತ್ಯ ಭೂ ಇತಿಹಾಸವನ್ನು ಓದುವವರಿಗೆ ಎದ್ದು ಕಾಣುತ್ತದೆ. ಅದು ಶಾಶ್ವತವಾಗಿ. ಆಂಥ್ರೊಪೋಸೀನ್ ಎನ್ನುವುದನ್ನು ಪರ್ವದ ಲೆಕ್ಕದಲ್ಲಿ ಸೇರಿಸಿ ಎನ್ನುವುದು ಇನ್ನೊಂದು ಕಿವಿಮಾತು. ಆದರೆ ಇದರ ಪ್ರಾರಂಭ ಎಲ್ಲಿಂದ? ಈ ಬಗ್ಗೆ ಸ್ವಲ್ಪ ಗೊಂದಲವಿದೆ.

ಮನುಷ್ಯನ ದಬ್ಬಾಳಿಕೆ, ಸಹಜೀವಿಗಳ ಮೇಲೆ ಅಧಿಕಾರ, ಶೋಷಣೆ, ಯಜಮಾನಿಕೆ ಶುರುವಾಗಿದ್ದು 11,700 ವರ್ಷಗಳಿಂದ



### ಭಾರತ ಕಳೆದುಕೊಂಡದ್ದೆಷ್ಟು?

ಭಾರತದ ಪ್ರಮುಖ ಜೀವಿವೈವಿಧ್ಯದ ನೆಲೆ ಎಂದರೆ ಪಶ್ಚಿಮ ಘಟ್ಟಗಳು, ಪೂರ್ವ ಘಟ್ಟ ಮತ್ತು ಹಿಮಾಲಯ. ಜಗತ್ತಿನ ಇತರ ದೇಶಗಳಿಗೆ ಹೋಲಿಸಿದರೆ ಭಾರತದ ಜೀವಿ ವೈವಿಧ್ಯಗಳ ನಾಶ ದೊಡ್ಡ ಸ್ತರದಲ್ಲೇ ಇದೆ. ಈಗಾಗಲೇ ಶೇ. 12 ಭಾಗ ಸ್ತನಿಗಳು, ಶೇ. 19 ಭಾಗ ದ್ವಿಚರಿಗಳು, ಶೇ. 3 ಭಾಗ ಪಕ್ಷಿಗಳನ್ನು ಕೇವಲ ಕಳೆದ ಐದು ವರ್ಷಗಳಲ್ಲಿ ಕಳೆದುಕೊಂಡಿದ್ದೇವೆ. ದೇಶದಲ್ಲಿ ಈಗ ದಾಖಲಿಸಿರುವ ಒಂದು ಲಕ್ಷ ಪ್ರಾಣಿ ಪ್ರಭೇದಗಳ ಪೈಕಿ 680 ಪ್ರಭೇದಗಳು ಕಶೇರುಕಗಳೇ. ಈ ಪೈಕಿ 550 ಪ್ರಭೇದಗಳು ನಾಶಭೀತಿಯ ಅಂಚಿನಲ್ಲಿವೆ. (ಮಾಹಿತಿ: ಭಾರತೀಯ ಪ್ರಾಣಿ ವಿಜ್ಞಾನ ಸರ್ವೇ ಸಂಸ್ಥೆ)